**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.**

## ಸಿಸಿ ನಂ.58/2019

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿತರುಃ** ಎ1.ಸಿದ್ದಪ್ಪ ತಂದೆ ಬಸಪ್ಪ ಬುರಲಿ,
40 ವರ್ಷ, ಉಃ ಒಕ್ಕಲುತನ, ವಾಸಃ ಆತನೂರ ಗ್ರಾಮ,
ತಾಃ ಅಫಜಲಪೂರ , ಜಿಃ ಕಲಬುರಗಿ.

ಎ2.ಕೋಮಣ್ಣ ತಂದೆ ಬಸಣ್ಣ ಹಿಳ್ಳಿ,
38 ವರ್ಷ, ಉಃ ಒಕ್ಕಲುತನ, ವಾಸಃ ಖೇಡಗಿ ಗ್ರಾಮ,
ತಾಃ ಇಂಡಿ, ಜಿಃ ವಿಜಯಪೂರ.

**ಆರೋಪಣೆ**

ದಿನಾಂಕಃ 11.05.2018 ರಂದು ಬೆಳಿಗ್ಗೆ 09-50 ಗಂಟೆ ಸಮಯದಲ್ಲಿ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಫಜಲಪೂರ-ವಿಜಯಪೂರ ರಸ್ತೆಗೆ ಇರುವ ಸೋನ್ನ ಕ್ರಾಸ ಹತ್ತಿರ ವಿಧಾನ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅಕ್ರಮವನ್ನು ತಡೆಗಟ್ಟಲು ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ, ಆರೋಪಿತರು ಕೆಎ-32-ಡಿ-5555 ನೇದ್ದರ ಕಾರಿನಲ್ಲಿ 1ನೇ ಆರೋಪಿಯಾದ ನೀವು ಯಾವುದೇ ದಾಖಲೆಗಳಿಲ್ಲದ 200/- ರೂಪಾಯಿ ಮುಖ ಬೆಲೆಯ 100 ನೋಟುಗಳು 20,000/- ರೂ.ನಗದು ಹಣ, 2ನೇ ಆರೋಪಿಯಾದ ನೀವು ಯಾವುದೇ ದಾಖಲೆಗಳಿಲ್ಲದ 500/- ರೂ. ಮುಖ ಬೆಲೆಯ 98 ನೋಟುಗಳು 49,000/- ರೂಪಾಯಿ ನಗದು ಹಣ, ಹೀಗೆ ಒಟ್ಟು 69,000/- ರೂ. ಹಣವನ್ನು ಯಾವುದೇ ದಾಖಲೆ ಇಲ್ಲದೇ ತಮ್ಮ ಹತ್ತಿರ ಇಟ್ಟುಕೊಂಡು ಸಾಗಾಟ ಮಾಡುತ್ತಿದ್ದ ಕಾರಣ ಆ ಮೂಲಕ 1 ಮತ್ತು 2ನೇ ಆರೋಪಿತರಾದ ನೀವು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡಿ, ಕರ್ನಾಟಕ ಪೋಲಿಸ ಕಾಯ್ದೆ ಕಲಂ. 98

ಹಾಗೂ ಭಾ.ದಂ.ಸಂ.ಕಲಂ.188 ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆನದೊಳಗೆ ಶಿಕ್ಷಾರ್ಹ ಅಪರಾಧವೆಸಗಿಗಿರುತ್ತೀರಿ ಎಂದು ಅಪಾದನೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಃ ಆರೋಪಣೆ ಃ**

ಪ್ರಃ-1ಃ ಮೇಲ್ಕಾಣಿಸಿದ ಆರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಾಡಿಕೊಂಡಿದ್ದೀರಾ?

ಉಃ 1ನೇ ಆರೋಪಿಃ

ಉಃ 2ನೇ ಆರೋಪಿಃ

ಪ್ರಃ-2 ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ನಡೆಯಬೇಕಾ?

ಉಃ 1ನೇ ಆರೋಪಿಃ

ಉಃ 2ನೇ ಆರೋಪಿಃ

(ಮೇಲೆ ನಮೂದು ಮಾಡಿದ ಆರೋಪಿತರ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದು ಸದರಿ ಹೇಳಿಕೆಯು ಆರೋಪಿತರು ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

ದಿನಾಂಕಃ 19.05.2025

**(ಶ್ರೀ ಅನೀಲ ಅಮಾತೆ )**
**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.**
**ಅಫಜಲಪೂರ.**